# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 903 |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.07.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಯಾವ ಯಾವ ತಾಲ್ಲೂಕುಗಳ ಸರ್ಕಾರಿ ಜಮೀನಿನಲ್ಲಿ ಎಷ್ಟು ಜನ ರೈತರು ಸಾಗುವಳಿ ಮಾಡುತ್ತಿದ್ದಾರೆ; ಸಾಗುವಳಿ ಮಾಡುತ್ತಿರುವ ಎಷ್ಟು ಜನ ರೈತರಿಗೆ ಸಾಗುವಳಿ ಚೀಟಿಯನ್ನು ಮಂಜೂರು ಮಾಡಲಾಗಿದೆ; (ವಿವರ ನೀಡುವುದು)</td><td>
ಬೆಂಗಳೂರು ನಗರ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, ಸದರಿ 5 ತಾಲ್ಲೂಕುಗಳಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ಕೋರಿ ನಮೂನೆ-50, 53 ಮತ್ತು 57ರಲ್ಲಿ ಈ ಕೆಳಕಂಡಂತೆ ರೈತರುಗಳು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.
<table>
<tr><th rowspan="2">ಕ್ರ. ಸಂ.</th><th rowspan="2">ತಾಲ್ಲೂಕು</th><th colspan="3">ಅರ್ಜಿ ಸಂಖ್ಯೆ</th></tr>
<tr><th>ನಮೂನೆ-50</th><th>ನಮೂನೆ-53</th><th>ನಮೂನೆ-57</th></tr>
<tr><td>1</td><td>ಬೆಂಗಳೂರು ಉತ್ತರ</td><td>3038</td><td>1440</td><td>305</td></tr>
<tr><td>2</td><td>ದಕ್ಷಿಣ</td><td>6745</td><td>6975</td><td>1533</td></tr>
<tr><td>3</td><td>ಪೂರ್ವ</td><td>1715</td><td>1226</td><td>7</td></tr>
<tr><td>4</td><td>ಯಲಹಂಕ</td><td>5055</td><td>2903</td><td>194</td></tr>
<tr><td>5</td><td>ಆನೇಕಲ್</td><td>6377</td><td>7229</td><td>1841</td></tr>
<tr><td></td><td>ಒಟ್ಟು</td><td>22930</td><td>19773</td><td>3880</td></tr>
</table>
ಸ್ವೀಕೃತವಾಗಿರುವ ಅರ್ಜಿಗಳಲ್ಲಿ ಈ ಕೆಳಕಂಡಂತೆ ಸಾಗುವಳಿ ಚೀಟಿಯನ್ನು ವಿತರಿಸಲಾಗಿರುತ್ತದೆ.
<table>
<tr><th rowspan="2">ಕ್ರ. ಸಂ.</th><th rowspan="2">ತಾಲ್ಲೂಕು</th><th colspan="3">ಸಾಗುವಳಿ ಚೀಟಿ ಅರ್ಜಿಗಳ ಸಂಖ್ಯೆ</th></tr>
<tr><th>ನಮೂನೆ-50</th><th>ನಮೂನೆ-53</th><th>ನಮೂನೆ-57</th></tr>
<tr><td>1</td><td>ಬೆಂಗಳೂರು ಉತ್ತರ</td><td>0</td><td>53</td><td>0</td></tr>
<tr><td>2</td><td>ದಕ್ಷಿಣ</td><td>729</td><td>918</td><td>0</td></tr>
<tr><td>3</td><td>ಪೂರ್ವ</td><td>134</td><td>15</td><td>0</td></tr>
<tr><td>4</td><td>ಯಲಹಂಕ</td><td>1027</td><td>370</td><td>0</td></tr>
<tr><td>5</td><td>ಆನೇಕಲ್</td><td>1149</td><td>14</td><td>0</td></tr>
<tr><td></td><td>ಒಟ್ಟು</td><td>3039</td><td>1370</td><td>0</td></tr>
</table>
</td></tr>
<tr><td>ಆ)</td><td>ಈ ಜಿಲ್ಲೆಗಳಲ್ಲಿ ಸಾಗುವಳಿ ಮಾಡುತ್ತಿದ್ದು, ರೈತರು ಅರ್ಜಿ ನಮೂನೆ 50, 51, 52ಮತ್ತು 53ರನ್ನು ಸಲ್ಲಿಸಿ ಎಷ್ಟು ವರ್ಷಗಳಾಗಿವೆ: (ತಾಲ್ಲೂಕುವಾರು ವಿವರಗಳೊಂದಿಗೆ ಬಂದಿರುವ ಅರ್ಜಿಗಳ ಸಂಖ್ಯೆಯನ್ನು ನೀಡುವುದು)</td><td>ನಮೂನೆ-50ರ ಅರ್ಜಿಯನ್ನು 1991ನೇ ಸಾಲಿನಲ್ಲಿ ಮತ್ತು ನಮೂನೆ-53 ರಲ್ಲಿ ಅರ್ಜಿಯನ್ನು 1999ನೇ ಸಾಲಿನಲ್ಲಿ ನಮೂನೆ-57ರ ಅರ್ಜಿಯನ್ನು 2018ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಲು ಸರ್ಕಾರವು ಅವಕಾಶ ಕಲ್ಪಿಸಿಕೊಡಲಾಗಿತ್ತು.</td></tr>
</table>

| | | |
|---|---|---|
| ಇ) | ಬೆಂಗಳೂರು ನಗರ ಬಿಬಿಎಂಪಿ ವ್ಯಾಪ್ತಿಯ ಎಷ್ಟು ಕಿ.ಮಿ. ಅಂತರದಲ್ಲಿ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಜಮೀನನ್ನು ಮಂಜೂರು ಮಾಡಲಾಗಿದೆ. (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆಯಲ್ಲಿ ಬಿಬಿಎಂಪಿ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ ಬಿ.ಎಂ.ಪಿ. ಇದ್ದ ಸಂದರ್ಭದಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮ ಮಾಡಲಾಗಿರುತ್ತದೆ. |
| ಈ) | ಜಮೀನನ್ನು ಮಂಜೂರು ಮಾಡಲು ಬಿಬಿಎಂಪಿ ವ್ಯಾಪ್ತಿಯಿಂದ ನಿಗಧಿಪಡಿಸಿರುವ ಕಿ.ಮಿ. ಎಷ್ಟು; ಇದಕ್ಕೆ ಅನುಸರಿಸಿರುವ ಮಾನದಂಡಗಳಾವುವು? (ಸಂಪೂರ್ಣ ವಿವರದೊಂದಿಗೆ ಹಾಗೂ ಸರ್ಕಾರದ ಸುತ್ತೋಲೆ ಆದೇಶಗಳ ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು) | ಕರ್ನಾಟಕ ಭೂ ಕಂದಾಯ 1964ರ ಕಲಂ(ಎ) ರಡಿ ಬಿಬಿಎಂಪಿ ವ್ಯಾಪ್ತಿಯಿಂದ 18 ಕಿ.ಮೀ. ಹೊರಗಡೆ ಬರುವಂತಹ ಸರ್ಕಾರಿ ಜಮೀನಿನ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 168 ಎಲ್‌ಜಿಪಿ 2014, ದಿನಾಂಕ:18.09.2014ರ ಸುತ್ತೋಲೆಯಲ್ಲಿ ನಿರ್ಬಂಧಿತ ಅಂತರವನ್ನು ತೀರ್ಮಾನ ಮಾಡಲು ಕರ್ನಾಟಕ ಜನರಲ್ ಕ್ಲಾಸ್ ಕಾಯ್ದೆ 1906ರ ಕಲಂ 11ರಡಿ ವಿವರಿಸಿರುವಂತೆ ಕ್ರಮಕೈಗೊಳ್ಳಬೇಕಾಗುತ್ತದೆ.<br><br>11. Measurement of Distance: In the measurement of any distance, for the purposes of 1 (Any Mysore Act or Karantaka Act) 1 made after the commencement of this act, that distance shall, unless a different intention appears be measured in a straight line on horizontal plane (ಸುತ್ತೋಲೆಯ ಪ್ರತಿ ಲಗತ್ತಿಸಿದೆ). |

ಸಂಖ್ಯೆ: ಆರ್‌ಡಿ 66 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ ಆರ್‌ಡಿ 168 ಎಲ್.ಜಿ.ಪಿ. 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ:18-9-2014

## : ಸುತ್ತೋಲೆ :

ವಿಷಯ ವಿಧಾನ ಸಭಾ ಕ್ಷೇತ್ರವಾರು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ.

ಉಲ್ಲೇಖ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 168 ಎಲ್.ಜಿ.ಪಿ. 2014 ದಿನಾಂಕ 9-6-2014.

****

(ಕರ್ನಾಟಕ ಭೂಕಂದಾಯ ಕಾಯಿದೆ 1964 ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಕಲ್ಪಿಸಿರುವ ಅವಕಾಶದ ಅನ್ವಯ, 1991 ರಿಂದ 1999 ರ ವರೆಗೆ ಸಲ್ಲಿಸಲ್ಪಟ್ಟ ನಮೂನೆ 50-53 ರ ಅರ್ಜಿಗಳ ಪೈಕಿ ಸಾಕಷ್ಟು ಗಂಭೀರ ಪ್ರಮಾಣದ ಪ್ರಕರಣಗಳು ವಿಲೇವಾರಿಯಾಗದೇ ತಾಲ್ಲೂಕು ಹಂತದಲ್ಲಿ ಬಗರ್‌ಹುಕುಂ ಸಮಿತಿಗಳ ಮುಂದೆ ಅರ್ಜಿಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇವುಗಳ ಪೈಕಿ ಮಂಜೂರಾತಿಗೆ ಅರ್ಹವಿಲ್ಲದ ಅರ್ಜಿಗಳ ಬಗ್ಗೆಯೂ ಕೂಡಾ ಸಮಿತಿಗಳು ತೀರ್ಮಾನ ಕೈಗೊಳ್ಳದೇ ಬಾಕಿ ಇಟ್ಟಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.) ಇದಲ್ಲದೇ ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಸಂಬಂಧಿಸಿದ ಸಾಕಷ್ಟು ಪ್ರಕರಣಗಳಲ್ಲಿ ನಮೂನೆ 50 ಮತ್ತು 53 ರ ಅರ್ಜಿಗಳು ಸಾಕಷ್ಟು ಬಾಕಿ ಇರುವುದರಿಂದ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಇದಲ್ಲದೇ ಮಾನ್ಯ ನ್ಯಾಯಾಲಯವು ಸಹ ಬಗರ್‌ಹುಕುಂ ಸಮಿತಿಗಳು ಅರ್ಜಿಗಳನ್ನು ಇತ್ಯರ್ಥ ಮಾಡದೇ ಇರುವುದನ್ನು ಹಾಗೂ ನಿಗದಿಪಡಿಸಿದ ಮಾನದಂಡಗಳ ಚೌಕಟ್ಟಿನಲ್ಲಿ ಇಲ್ಲದ ಪ್ರಕರಣಗಳನ್ನು ಕೂಡಾ ಮಂಜೂರಾತಿ ಮಾಡಿರುವುದನ್ನು ತೀವ್ರವಾಗಿ ಗಮನಿಸಿರುತ್ತದೆ.

ಈ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸರ್ಕಾರವು ಉಲ್ಲೇಖದ ದಿನಾಂಕ 9-6-2014 ರಂದು ಸುತ್ತೋಲೆ ಸೂಚನೆಗಳನ್ನ ಹೊರಡಿಸಿ ಆಯಾ ಕ್ಷೇತ್ರವಾರು ಬಗರ್‌ಹುಕುಂ ಸಮಿತಿಗಳ ಮುಂದೆ ಬಾಕಿ ಇರುವ ನಮೂನೆ 50-53 ರ ಅರ್ಜಿಗಳ ಅರ್ಹತೆಯನ್ನು ಸಂಬಂದಪಟ್ಟ ಸದಸ್ಯ ಕಾರ್ಯದರ್ಶಿಗಳು ಕೂಡಲೇ ಪುನರ್ ಪರಿಶೀಲಿಸಿ ನಿಯಮಾವಳಿಯಲ್ಲಿ ನಿಗದಿಪಡಿಸಲಾದ ಷರತ್ತನ್ನು ಪೂರೈಸದ ಅನರ್ಹ ಪ್ರಕರಣಗಳನ್ನು ಸಮಿತಿಯಿಂದ ಮರಳಿ ಪಡೆದು ನಿಯಮಗಳ ಪ್ರಕಾರ ತಿರಸ್ಕರಿಸಲು ಸೂಚಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ನು ಇನ್ನಷ್ಟು ಸರಳೀಕರಣಗೊಳಿಸುವ ದೃಷ್ಟಿಯಿಂದ ಈ ಮುಂದಿನಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ.

ದಿನಾಂಕ 9-6-2014 ರ ಸುತ್ತೋಲೆಯ 2 ನೇ ಪುಟದ 2 ನೇ ಖಂಡಿಕೆ (ಪ್ಯಾರಾ)ಯನ್ನು ಸಂಪೂರ್ಣವಾಗಿ ಕೈಬಿಟ್ಟು ಈ ಮುಂದಿನಂತೆ ಓದಿಕೊಳ್ಳಲು ಸೂಚಿಸಿದೆ.

> "ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಈ ಕೆಳಗಿನ ಕೋಷ್ಟಕದ ಅಂಕಣ 2 ರಲ್ಲಿ ತೋರಿಸಿದ ಮಹಾನಗರ ಪಾಲಿಕೆ, ನಗರ ಸಭೆ ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ವ್ಯಾಪ್ತಿಯ ಸರಹದ್ದಿನಿಂದ ಕೋಷ್ಟಕದ ಅಂಕಣ 3 ರಲ್ಲಿ ನಮೂದಿಸಿದ ನಿರ್ಬಂದಿತ ಅಂತರದಲ್ಲಿ ಬರುವ ಜಮೀನಿನ ಅನಧೀಕೃತ ಸಾಗುವಳಿಯ ಸಕ್ರಮಗೊಳಿಸುವುದನ್ನು ನಿರ್ಬಂಧಿಸಲಾಗಿರುತ್ತದೆ."

-2

(54)



| ಕೋಷ್ಟಕ | | |
|---|---|---|
| ಕ್ರ.ಸಂಖ್ಯೆ | ಸ್ಥಳಗಳು | ಅಂತರ |
| 01 | ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ಅಡಿಯಲ್ಲಿ ಬೆಂಗಳೂರು ನಗರ | 18 ಕಿ.ಮಿ. |
| 02 | ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳು ಅನುಕ್ರಮವಾಗಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 | 10 ಕಿ.ಮಿ. |
| 03 | ಕರ್ನಾಟಕ ಪುರಸಭಾ ಅಧಿನಿಯಮ 1964 ರ ಅಡಿಯಲ್ಲಿ ರಚಿತವಾದ ಎಲ್ಲಾ ನಗರಗಳು, ಪುರಸಭೆಗಳು, (ಐವತ್ತು ಸಾವಿರ ಜನಸಂಖ್ಯೆಯನ್ನು ಮೀರಿ ಜನಸಂಖ್ಯೆ ಹೊಂದಿದ್ದು) | 5 ಕಿ.ಮಿ. |

ಕರ್ನಾಟಕ ಭೂಕಂದಾಯ ನಿಯಮಗಳು 1966 ರ ನಿಯಮ 108ಕೆ ಅನ್ವಯ ಸುಳ್ಳು ಅಥವಾ ಮೋಸಗಾರಿಕೆ ನಿರೂಪಣೆಯ ಮೂಲಕ ಭೂಮಂಜೂರಾತಿ ಪಡೆಯಲಾಗಿದ್ದರೆ, ಅಥವಾ ಅದು ನಿಯಮಗಳಿಗೆ ವಿರುದ್ಧವಾಗಿದ್ದರೆ ಅಂತಹ ಜಮೀನುಗಳನ್ನು ಮರಳಿ ಪಡೆಯಲು ಸಹಾಯಕ ಆಯುಕ್ತರಿಗೆ ಅಧಿಕಾರವನ್ನು ನೀಡಲಾಗಿರುತ್ತದೆ.

ಮೇಲಿನ ಖಂಡಿಕೆಯಲ್ಲಿ ತಿಳಿಸಿರುವಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಗೂ ಅದರ ಸೆರಹದ್ದಿನಿಂದ ನಿರ್ಬಂದಿಸಿರುವ ಅಂತರದ ಒಳಗೆ ಇರುವ ಜಮೀನುಗಳನ್ನು ಸಕ್ರಮಗೊಳಿಸಿದ್ದಲ್ಲಿ ಅವುಗಳನ್ನು ಕಾನೂನು ಬಾಹೀರವೆಂದು ಪರಿಗಣಿಸಬೇಕಾದ್ದು ಗಮನಾರ್ಹ.

ಆದರೆ ನಿರ್ಬಂಧಿತ ಅಂತರವನ್ನು ಯಾವ ರೀತಿ ತೀರ್ಮಾನಿಸಬೇಕು ಎಂಬ ಬಗ್ಗೆ ಅಧಿನಿಯಮದ ಕಲಂ 94ಎ ಮತ್ತು 94ಬಿ ರಲ್ಲಿ ಸ್ಪಷ್ಟ ಹಾಗೂ ನಿರ್ದಿಷ್ಟವಾಗಿ ತಿಳಿಸದೇ ಇರುವುದರಿಂದ ಕೆಲವೊಂದು ಉಪ ವಿಭಾಗಾಧಿಕಾರಿಗಳು ಇಂತಹ ಅಂತರವನ್ನು ರಸ್ತೆ ಮಾರ್ಗವಾಗಿ ಆಗುವಂತಹ ದೂರವನ್ನು ಪರಿಗಣಿಸಬೇಕೆ ಅಥವಾ ನೇರ ಅಂತರವನ್ನು ( ಏರಿಯಲ್ ಡಿಸ್ಟನ್ಸ್ ) ಗಣನೆಗೆ ತೆಗೆದುಕೊಳ್ಳಬೇಕೆ ಎಂಬ ಜಿಜ್ಞಾಸೆ ಉಂಟಾಗಿದ್ದು ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೋರುತ್ತಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈಗಾಗಲೇ ಹೇಳಿದಂತೆ ಕರ್ನಾಟಕ ಭೂಕಂದಾಯ ಕಾಯಿದೆ 1964 ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ನಿರ್ಬಂಧಿತ ಅಂತರವನ್ನು ತೀರ್ಮಾನಿಸುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಯಪಡಿಸದೇ ಇರುವುದರಿಂದ ಕರ್ನಾಟಕ ಜನರಲ್ ಕ್ಲಾಸ್ ಕಾಯಿದೆ 1906 ರ ಕಲಂ 11 ರ ಅಡಿಯಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಸದರಿ ಉಪ ಬಂಧದ ಉದೃತ ಭಾಗ ಈ ಮುಂದಿನಂತಿದೆ.

> "**11. Measurement of distances.-** In the measurement of any distance, for the purposes of 1[any Mysore Act or Karnataka Act]1 made after the commencement of this Act, that distance shall, unless a different intention appears, be measured in a straight line on a horizontal plane".

22



ಆದ್ದರಿಂದ ನಿರ್ಬಂಧಿತ ಅಂತರವನ್ನು ನಿರ್ದರಣೆ ಮಾಡುವಾಗ ನೇರ ಅಂತರವನ್ನು ಅಳತೆ ಮಾಡಿಸಿ ಪ್ರಕರಣಗಳಲ್ಲಿ ತೀರ್ಮಾನ ಕೈಗೊಳ್ಳಲು ಈ ಮೂಲಕ ಸೂಚಿಸಿದೆ. ಈ ಪ್ರಕ್ರಿಯೆಯನ್ನು ಸಕ್ಷಮ ಪ್ರಾಧಿಕಾರವಾದ ಭೂಮಾಪನ ಇಲಾಖೆಯಿಂದ ನಿರ್ವಹಿಸಿ ದೃಡೀಕೃತ ಮಾಹಿತಿಯನ್ನು ಪಡೆದು ಗಣನೆಗೆ ತೆಗೆದುಕೊಳ್ಳಲು ಸೂಚಿಸಿದೆ.

ಇನ್ನುಳಿದಂತೆ ದಿನಾಂಕ 9-6-2014 ರ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1)

18/9/14

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ, - ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಭೂ ಮಂಜೂರಾತಿಯ-1, ಕಂದಾಯ ಇಲಾಖೆ ಇವರಿಗೆ ಕಳುಹಿಸುವಂತೆ ಕೋರಿದೆ.

ಪ್ರತಿ :

1) ಎಲ್ಲಾ ಪ್ರಾದೇಶಿಕ ಆಯುಕ್ತರು,
2) ಎಲ್ಲಾ ಜಿಲ್ಲಾಧಿಕಾರಿಗಳು,
3) ಎಲ್ಲಾ ಉಪ ವಿಭಾಗಾಧಿಕಾರಿಗಳು,
4) ಎಲ್ಲಾ ತಹಸೀಲ್ದಾರರುಗಳಿಗೆ ( ಸಂಬಂದಪಟ್ಟ ಜಿಲ್ಲಾಧಿಕಾರಿ ಮುಖಾಂತರ )
5) ಅಧ್ಯಕ್ಷರುಗಳು, ಎಲ್ಲಾ ಬಗರ್ ಹುಕುಂ ಸಮಿತಿಗಳು ( ಜಿಲ್ಲಾಧಿಕಾರಿಗಳ ಮುಖಾಂತರ )
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.